# ಜ್ಞಾನೇಶ್ವರನ ಗಣಪತಿ

ಜ್ಞಾನೇಶ್ವರ ಮಹಾರಾಷ್ಟ್ರದ ದೊಡ್ಡ ಸಂತ. ಅನುಭಾವಿ. ಅದಕ್ಕಿಂತಲೂ ಹೆಚ್ಚು ಮರಾಠಿ ಭಾಷೆಯ ಆದ್ಯಕವಿಗಳಲ್ಲಿ ಓರ್ವ. ಆ ಭಾಷೆಯನ್ನು ರೂಪಿಸಿದ ಶ್ರೇಷ್ಠಕವಿ. ಈ ಎರಡು ಮನೋಧರ್ಮಗಳು ಅನುಭಾವದ ಮತ್ತು ಕಾವ್ಯದ ಮನೋಧರ್ಮಗಳು ಆಂತರಿಕವಾಗಿ ತುಂಬ ಹತ್ತಿರ ಇರುವಂತೆ ತೋರುತ್ತದೆ. ನಮ್ಮ ವಚನಕಾರರನ್ನು ನೋಡಿದರೆ, ಬಸವಣ್ಣ, ಅಲ್ಲಮ, ಅಕ್ಕ, ದಾಸಿಮಯ್ಯ ಇಂಥವರು; ಹಾಗೆಯೇ ದಾಸ–ಪಂಥವನ್ನು ನೋಡಿದರೆ, ಕನಕ; ಪುರಂದರರಂಥವರು ಅನುಭಾವಿಗಳೂ ಹೌದು, ಶ್ರೇಷ್ಠ ಕವಿಗಳೂ ಹೌದು. ಈ ಸಂಬಂಧವನ್ನು ಬೇಂದ್ರೆಯವರು, ಕವಿಯ ಬಟ್ಟೆ ಕಾವಿ ಬಟ್ಟೆ ಎಂದು ಪದಗಳೊಡನೆ ಆಟವಾಡುತ್ತ ಸೂಚಿಸಿದ್ದುಂಟು. ಬಟ್ಟೆ ಎಂದರೆ ದಾರಿ ಎಂದೂ ಅರ್ಥ.

ಈ ಎರಡೂ ಮನೋಧರ್ಮಗಳೂ ಹತ್ತಿರ ಇವೆ ಎಂದಾಗ ಇವೆರಡೂ ಸ್ವ–ಕೇಂದ್ರಿತತೆಯನ್ನು ಮೀರಿದ ಮನೋಧರ್ಮಗಳು ಎಂದು ಅರ್ಥ. ಶರಣರಾಗಲೀ ದಾಸರಾಗಲೀ ಅಹಂಕೇಂದ್ರಿತ ದೃಷ್ಟಿಯಿಂದ, ತಮ್ಮ ವ್ಯಕ್ತಿತ್ವವನ್ನು ಲೋಕದಲ್ಲಿ ಸ್ಥಾಪಿಸಬೇಕೆಂಬ ಅಹಮಹಮಿಕೆಯಿಂದ ಲೋಕವನ್ನು ನೋಡುವವರಲ್ಲ. ಎನಗಿಂತ ಕಿರಿಯರಿಲ್ಲ ಎನ್ನುವ ಅಪೂರ್ವ ನಮ್ರತೆಯಿಂದ ಲೋಕವನ್ನು ನೋಡುವವರು. ಆಶ್ಚರ್ಯವೆಂದರೆ ಇದು ಕೀಳರಿಮೆಯಲ್ಲ! ಏಕೆಂದರೆ ಇವರು ಲೋಕಕ್ಕೆ ಶರಣರಾದವರೇ ಅಲ್ಲ. ದೈವಕ್ಕೆ ಶರಣಾದವರು. ದೇವರದಾಸರಾದವರು. ಹಾಗೆ ಶರಣಾಗಿ ಅದುವರೆಗಿನ ಲೋಕದ ದಾಸ್ಯದಿಂದ ಬಿಡುಗಡೆ ಪಡೆದವರು! ಕೂಡಲ ಸಂಗನ ಶರಣರಿಗೆ, ವಿಟ್ಠಲನ ದಾಸರಿಗೆ ಲೋಕದ ಅಂಜಿಕೆ ಇಲ್ಲ. ಅಂಜಿಕೆಯನ್ನು ಕಳೆದುಕೊಂಡುದರಿಂದಲೇ ಲೋಕವನ್ನು ನಿಜವಾಗಿ ಪ್ರೀತಿಸಬಲ್ಲರು ಕೂಡ! ಲೋಕ; ಯಾವುದನ್ನೆಲ್ಲ ಮಹತ್ವದ್ದು ಎಂದು ಭಾವಿಸುತ್ತದೋ ಅದನ್ನೆಲ್ಲ ಕೇವಲ ಲೊಳಲೊಟ್ಟೆ ಎಂದು ಲೋಕ ಕೇಳುವಂತೆ ಇವರು ಹಾಡಬಲ್ಲರು. ಸತ್ಯ ಹೇಳುವುದಕ್ಕೆ ಬದುಕಿಡೀ ಅಂಜುತ್ತಲೇ ಇರುವ ಲೋಕದಲ್ಲಿ ಇವರು ಸತ್ಯವನ್ನಲ್ಲದೆ ಬೇರೆ ಹೇಳಲಾರರು! ವಿಟ್ಠಲನ ದಾಸರು ಲೋಕದಲ್ಲಿ ಸ್ವತಂತ್ರರು!

ಕವಿಯ ಮನೋಧರ್ಮಕ್ಕೂ ಕೂಡ ಸ್ವ–ಕೇಂದ್ರಿತತೆಯ ಮಿತಿ ತಿಳಿದಿರುತ್ತದೆ. ತಿಳಿದಿರುವುದರಿಂದ, ಒಂದು ಆವೃತ ಗ್ರಹಿಕೆಯಿಂದ ಬದುಕನ್ನು, ಲೋಕವನ್ನು ನೋಡಲು ಕವಿಗೆ ಸಾಧ್ಯವಾಗುತ್ತದೆ. ಸ್ವ–ಕೇಂದ್ರಿತ ದೃಷ್ಟಿ ಇನ್ನೊಂದು ಪಾತ್ರಕ್ಕೆ ಅದಕ್ಕೆ ಸಲ್ಲಬೇಕಾದ ನ್ಯಾಯವನ್ನು ಸಲ್ಲಿಸಲಾರದು. ಅದನ್ನು ಅದರದರ ಬೆಳಕಿನಲ್ಲಿಯೇ ನೋಡಲು ಸಾಧ್ಯವಾಗದೆ ಇದ್ದರೆ ಎಂಥ ಕವಿತ್ವ? ಎಲ್ಲಿಯ ಕವಿತ್ವ? ತಾನು ಸ್ವತಂತ್ರನಾದವನು/ಳು ಮಾತ್ರ ಪ್ರತಿಯೊಂದು ಪಾತ್ರದ ಸ್ವಾತಂತ್ರ್ಯವನ್ನೂ ಗ್ರಹಿಸಬಲ್ಲನು/ಳು.

ಈ ಆಂತರಿಕ ಸ್ವಾತಂತ್ರ್ಯ, ಕವಿ– ಅನುಭಾವಿ ಮನೋಧರ್ಮಗಳನ್ನು ಹತ್ತಿರಕ್ಕೆ ತಂದಿದೆ. ಇಬ್ಬರಿಗೂ ಆವೃತಗ್ರಹಿಕೆಯೇ ಮುಖ್ಯ. ಈ ಆವೃತ ಗ್ರಹಿಕೆಯುಂಟಾಗಬೇಕಾದರೆ, ತಾನು ಸರಿದು ನಿಲ್ಲಬೇಕೆನ್ನುವ ತಿಳುವಳಿಕೆಯೂ ಇಬ್ಬರಿಗೂ ಮುಖ್ಯ. ಸರಿದು ನಿಲ್ಲುವುದೆಂದರೆ, ಭಾಷೆಯನ್ನು ದುಡಿಸಿಕೊಳ್ಳುವುದು ಎಂದು ಎಗ್ಗಿಲ್ಲದೆ ಹೇಳುತ್ತೇವಲ್ಲ, ಹಾಗೆ ಭಾಷೆಯನ್ನು ನಾವು ದುಡಿಸಿಕೊಳ್ಳುವುದಲ್ಲ. ಭಾಷೆಯೇ ನಮ್ಮನ್ನು ದುಡಿಸಿಕೊಳ್ಳುವುದು ಎಂಬ ಸೂಕ್ಷ್ಮವನ್ನು ತಿಳಿಯುವುದು. ಈ ಸೂಕ್ಷ್ಮ ಕವಿಗೆ, ಅನುಭಾವಿಗೆ ಇಬ್ಬರಿಗೂ ಮಹತ್ವದ್ದು. ಆವೃತಗ್ರಹಿಕೆಗೆ ಸಾಕ್ಷಿಯಾಗಿ ಜ್ಞಾನೇಶ್ವರ ಮಹಾರಾಜ್, ತಮ್ಮ ಭಾವಾರ್ಥ ದೀಪಿಕೆ (ಭಗವದ್ಗೀತೆಯ ಭಾಷ್ಯ)ಯ ಪ್ರಾರಂಭದಲ್ಲಿ ಮಾಡಿದ ಗಣಪತಿಯ ಅಪೂರ್ವ ವರ್ಣನೆಯನ್ನು ನೋಡಬಹುದು. ಜ್ಞಾನೇಶ್ವರನಿಗೆ, ಗಣಪತಿ ಎಂದರೆ ಸಮಸ್ತ ವಾಙ್ಮಯವೇ ಶರೀರವಾಗಿ ಇರುವಂಥವನು! ಈ ಮೈಯಲ್ಲಿ; ವೇದಗಳಿವೆ; ಸ್ಮೃತಿಗಳಿವೆ; ಪುರಾಣೇತಿಹಾಸಗಳಿವೆ, ಕಾವ್ಯ–ಶಾಸ್ತ್ರಗಳಿವೆ, ವಾದಗಳಿವೆ, ಮೀಮಾಂಸೆಗಳಿವೆ; ಏನುಂಟು ಏನಿಲ್ಲ? ಭಾಷೆಯ ಸರ್ವಸಾಧ್ಯತೆಯೇ ಗಣಪತಿಯ ಶರೀರವಾಗಿ ಬಿಟ್ಟಿದೆ!

ಇದು ಆವೃತಗ್ರಹಿಕೆಯಾಗಿರಬಹುದು. ಆದರೆ ಇದೊಂದು ರೀತಿಯ ಸರಳೀಕರಣ ಕೂಡ ಹೌದು ಎನ್ನಬಹುದು ನಾವು. ಏಕೆಂದರೆ ಈ ಶಾಸ್ತ್ರ ಪುರಾಣಗಳೆಲ್ಲ ಒಂದೇ ಮಾತನ್ನು ಹೇಳುತ್ತಿಲ್ಲ. ಇಲ್ಲೆಲ್ಲ ತೀವ್ರವಾದ ಭಿನ್ನಾಭಿಪ್ರಾಯಗಳಿವೆಯಲ್ಲ ಎಂದರೆ, ಈ ಪ್ರಶ್ನೆ ಜ್ಞಾನೇಶ್ವರನಿಗೂ ಬಂದಂತಿದೆ. ಈ ಓವಿಯನ್ನು ಕೇಳಿ. ದೇಖಾ ಷಡ್ದರ್ಶನೇ ಮ್ಹಣಿಪತೀ! ತೇಚಿ ಭುಜಾಂಚಿ ಆಕೃತೀ! ಮ್ಹಣಾನಿ ವಿ–ಸಂವಾದೇ ಧರಿತೀ! ಆಯುಧೇ ಹಾತೀ!! ಗಣಪತಿಯ ಆರು ಕೈಗಳನ್ನು ನೋಡಿರಿ. ಅವು ಆರು ದರ್ಶನಗಳು! ಈ ದರ್ಶನಗಳೊಳಗೆ ಪರಸ್ಪರ ಭಿನ್ನಾಭಿಪ್ರಾಯವಿಲ್ಲವೆ? ಇವೆ. ವಿ–ಸಂವಾದ ಇದೆ. ಆರು ಕೈಗಳಲ್ಲಿರುವ ಆರು ಆಯುಧಗಳು ಪರಸ್ಪರ ವಿ–ಸಂವಾದಕ್ಕೆ ಸಾಕ್ಷಿಯಾಗಿವೆ!

ದ್ವೈತ–ಅದ್ವೈತಗಳೆಂಬ ಪರಸ್ಪರ ಸ್ವಲ್ಪವೂ ಒಪ್ಪಿಗೆ ಇಲ್ಲದ ಪ್ರಮೇಯಗಳಿವೆಯಲ್ಲ? ಹೌದು. ಗಣಪತಿಯ ಗಂಡಸ್ಥಲದ ಎರಡು ಭಾಗಗಳೇ ಅವು ಎನ್ನುತ್ತಾನೆ! (ಮೆದುಳಿನಲ್ಲಿ ಎರಡು ಭಾಗಗಳಿವೆ ಎನ್ನುತ್ತಾರಲ್ಲ!) ವೇದವನ್ನು ಒಪ್ಪದ ಬೌದ್ಧ ಧರ್ಮವಿದೆಯಲ್ಲ? ವೇದಾಂತಿಗಳು ಅದನ್ನು ಖಂಡಿಸುತ್ತಾರಲ್ಲ? ಹೌದು. ಬೌದ್ಧ ಧರ್ಮವೆಂದರೆ, ಗಣಪತಿಯ ಕೈಯಲ್ಲಿರುವ ಅವನದೇ ಮುರಿದ ದಂತ ಎನ್ನುತ್ತಾನೆ!

ಎಲ್ಲ ವಾದ– ವಿವಾದಗಳನ್ನೂ ಭಾಷೆಯ ಸಾಧ್ಯತೆಯಾಗಿ ನೋಡುತ್ತಾನೆ ಜ್ಞಾನೇಶ್ವರ! ಭಾಷೆಯನ್ನು ಗಣಪತಿಯ ಮೈಯಾಗಿಸಿ, ಒಂದು ಅಪ್ರತಿಮ ಭಾಷಾವಿಗ್ರಹವನ್ನು ಕಟ್ಟಿದ್ದಾನೆ. ಆವೃತಗ್ರಹಿಕೆ ಇಲ್ಲದೆ ಇವನ್ನೆಲ್ಲ ಬೇರೆಬೇರೆಯಾಗಿ ನೋಡುವುದು ವಿಗ್ರಹಭಂಜನೆ ಮಾಡಿದಂತೆ ಎಂದು ಸೂಚಿಸುತ್ತಾನೆ! ನೀಮಾಯೆಯೊಳಗೋ ನಿನ್ನೊಳುಮಾಯೆಯೋ ಎಂದ ಕನಕದಾಸರ ನುಡಿ ನೆನಪಾಗುತ್ತೆ.

■ ತೋಷ

## ಮಾತೇ ಮುತ್ತು

★ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವವನ್ನು ಬೋಧಿಸುವ ಧರ್ಮವನ್ನು ನಾನು ಪ್ರೀತಿಸುತ್ತೇನೆ.
–ಡಾ.ಬಾಬಾಸಾಹೇಬ ಅಂಬೇಡ್ಕರ್

★ ಆಲೋಚನೆಗಳೇ ಮನಸ್ಸಿನ ಸ್ವರೂಪ. ಆಲೋಚನೆಗಳನ್ನು ಹೊರತುಪಡಿಸಿ ಮನಸ್ಸು ಎನ್ನುವ ವಸ್ತು ಇಲ್ಲ.
–ರಮಣ ಮಹರ್ಷಿ

★ ಕನಸುಗಳನ್ನು ನನಸಾಗಿಸುವ ಅತ್ಯುತ್ತಮ ವಿಧಾನವೆಂದರೆ, ನಿದ್ರೆಯಿಂದ ಎಚ್ಚೆತ್ತುಕೊಳ್ಳುವುದು.
–ಪೌಲ್ ವೆಲೇರಿ

★ ಎಲ್ಲರೂ ಒಂದೇ ತರಹ ಆಲೋಚನೆ ಮಾಡುವಲ್ಲಿ, ಹೆಚ್ಚೇನೂ ಯೋಚನೆ ಮಾಡಲು ಆಗುವುದಿಲ್ಲ.
–ವಾಲ್ಟರ್ ಲಿಪ್‌ಮ್ಯಾನ್

★ ನ್ಯಾಯ ದೂರವೇ ಇರುವಂತೆ ನೋಡಿಕೊಳ್ಳಲು ಕಾನೂನನ್ನು ಬಳಸುವುದೇ ಜಗತ್ತಿನ ಅತಿದೊಡ್ಡ ಅನ್ಯಾಯ.
–ಸ್ಕಾಟ್ ಆ್ಯಡಮ್ಸ್

★ ನಿಮಗೆ ಬದುಕು ಕಲ್ಪಿಸುವ ಹೊಣೆಗಾರಿಕೆ ಜಗತ್ತಿನದು ಎಂದು ಹೇಳುತ್ತಾ ತಿರುಗಾಡದಿರಿ. ಜಗತ್ತು ನಿಮಗೆ ಏನೂ ಕೊಡಬೇಕಿಲ್ಲ. ಅದು ನೀವು ಬರುವುದಕ್ಕಿಂತ ಮೊದಲೇ ಇಲ್ಲಿತ್ತು.
–ಮಾರ್ಕ್ ಟ್ವೈನ್

★ ವಾಸ್ತವ ಹೇಗಿದೆಯೋ ಹಾಗೆಯೇ ಅದನ್ನು ಎದುರಿಸಿ. ಅದು ಹೀಗಿತ್ತು ಅಥವಾ ಹೀಗಿರಬೇಕಿತ್ತು ಎಂದು ಅಂದುಕೊಳ್ಳುವುದು ವ್ಯರ್ಥ.
–ಜಾಕ್ ವೆಲ್ಶ್

★ ನೂರು ಜನರಿಗೆ ಉಣಿಸಲು ಸಾಧ್ಯವಾಗದಿದ್ದರೆ, ಒಬ್ಬರಿಗಾದರೂ ಉಣಿಸಿ.
–ಮದರ್ ತೆರೀಸಾ

★ ಕನಸುಗಳಲ್ಲಿ ನಂಬಿಕೆ ಇಡಿ. ಸ್ವರ್ಗದ ಬಾಗಿಲುಗಳು ಅಲ್ಲೇ ಅಡಗಿಕೊಂಡಿವೆ.
–ಖಲೀಲ್ ಗಿಬ್ರಾನ್

★ ಮನೆಯೊಂದನ್ನು ನಡೆಸಲು ಇರುವ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳಬಲ್ಲ ಯಾವುದೇ ಮಹಿಳೆ, ದೇಶವನ್ನೂ ನಡೆಸಲು ಸಾಮರ್ಥ್ಯ ಹೊಂದಿರುತ್ತಾಳೆ.
–ಮಾರ್ಗರೆಟ್ ಥ್ಯಾಚರ್

★ ಶಾಂತಿಯುತ ಕ್ರಾಂತಿಯನ್ನು ಅಸಾಧ್ಯವಾಗಿಸುವವರು, ಹಿಂಸಾತ್ಮಕ ಕ್ರಾಂತಿಯನ್ನು ಅನಿವಾರ್ಯವಾಗಿಸುತ್ತಾರೆ.
–ಜಾನ್ ಎಫ್ ಕೆನೆಡಿ